


# ಗಣ್ಯರ ಡಿಎನ್‌ಎ ಮಾಹಿತಿ ಕಳವು

■ **ಶಶಿಕುಮಾರ್ ಸಿ.**

ಜೆನೆಟಿಕ್ ಟೆಸ್ಟಿಂಗ್ ಕಂಪನಿಯಾದ 23ಅಂಡ್‌ಮಿ ಮೇಲೆ ಈಚೆಗೆ ಸೈಬರ್ ದಾಳಿಯಾಗಿದ್ದು, ಈ ಕಂಪನಿಯು ಸಂಗ್ರಹಿಸಿದ್ದ ಗಣ್ಯರ ಡಿಎನ್‌ಎ ಮಾಹಿತಿಯನ್ನು ಕದಿಯಲಾಗಿದೆ.

ಈ ಜೆನೆಟಿಕ್ ಟೆಸ್ಟಿಂಗ್ ಕಂಪನಿಯು ಜಗತ್ತಿನ ಹಲವಾರು ಗಣ್ಯರ ಡಿಎನ್‌ಎ ಡೇಟಾವನ್ನು ಸಂಗ್ರಹಿಸಿಟ್ಟಿತ್ತು. ಅವರ ಮಾಹಿತಿಯನ್ನು ಕದ್ದಿರುವ ಖದೀಮರು ಅದನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡಿದ್ದಾರೆ ಎಂದು ವರದಿಯಾಗಿದೆ. ಅಮೆರಿಕ



ಮೂಲದ 23ಅಂಡ್‌ಮಿ, ಜೈವಿಕ ತಂತ್ರಜ್ಞಾನ ಮತ್ತು ಜೆನೋಮಿಕ್ಸ್ ಸಂಸ್ಥೆಯಾಗಿದೆ. ತನ್ನ ಲ್ಯಾಬ್‌ಗಳಿಗೆ ಲಾಲಾರಸದ ಮಾದರಿಯನ್ನು ಕಳುಹಿಸುವ ಗ್ರಾಹಕರಿಗೆ, ಅವರ ಪೂರ್ವಜರು ಮತ್ತು ಆನುವಂಶಿಕ ಮಾಹಿತಿಯ ವರದಿಯನ್ನು ನೀಡುವ ಜೆನೆಟಿಕ್ ಪರೀಕ್ಷಾ ಸೇವೆಗಳನ್ನು ಈ ಕಂಪನಿಯು ಒದಗಿಸುತ್ತದೆ.

ಕಂಪನಿಯಿಂದ ಹ್ಯಾಕರ್‌ಗಳು ಹತ್ತು ಲಕ್ಷ ಜನರ ಮಾಹಿತಿ ಕದ್ದು, ಆನ್‌ಲೈನ್‌ನಲ್ಲಿ ಮಾರಾಟ ಮಾಡಿದ್ದಾರೆ ಎಂದು ವರ್ಜ್ ವರದಿ ಮಾಡಿದೆ. ಡಿಎನ್‌ಎ ಡೇಟಾ ಒಳಗೊಂಡ 'ಅಶ್ಕೆನಾಜಿ ಡಿಎನ್‌ಎ ಡೇಟಾ ಆಫ್ ಸೆಲೆಬ್ರಿಟೀಸ್' ಎಂಬ ಡೇಟಾಬೇಸ್ ಅನ್ನು ಡಾರ್ಕ್ ವೆಬ್ ಫೋರಮ್‌ಗಳಲ್ಲಿ ಪ್ರಕಟಿಸಿದ ಬಳಿಕವಷ್ಟೇ ಈ ಬಗ್ಗೆ ಮಾಹಿತಿ ಬಹಿರಂಗವಾಗಿದೆ. ಡೇಟಾಬೇಸ್ ಡಿಸ್‌ಪ್ಲೇಯಲ್ಲಿ ಹಲವರ ಹೆಸರು, ಲಿಂಗ, ಜನ್ಮ ವರ್ಷ ಮತ್ತು ಆನುವಂಶಿಕ ವಂಶಾವಳಿಯ ಫಲಿತಾಂಶಗಳು ಸೇರಿ ಕೆಲವು ವಿವರಗಳಿವೆ. ಇದರಿಂದಾಗಿ ಪ್ರಪಂಚದ ಅಗ್ರಮಾನ್ಯ ಉದ್ಯಮಿಗಳಿಂದ ಹಿಡಿದು ರಾಜವಂಶಗಳವರೆಗೆ ಲಕ್ಷಾಂತರ ಜನರ ಡಿಎನ್‌ಎ ಪ್ರೊಫೈಲ್‌ಗಳು ಬಹಿರಂಗವಾಗಿದೆ.

ಪ್ರತಿಯೊಂದು ಡೇಟಾ ಸೆಟ್ ಅನ್ನು ಇಮೇಲ್ ವಿಳಾಸಗಳೊಂದಿಗೆ ನೀಡಲಾಗಿದೆ ಎಂದು ಡೇಟಾ ಮಾರಾಟ ವೇದಿಕೆಯ ಪೋಸ್ಟ್‌ವೊಂದರಲ್ಲಿ ತಿಳಿಸಲಾಗಿದೆ. ಫೇಸ್‌ಬುಕ್ ಮಾಲೀಕ ಮಾರ್ಕ್ ಜುಕರ್‌ಬರ್ಗ್, ಎಕ್ಸ್ ವೇದಿಕೆ ಮಾಲೀಕ ಎಲಾನ್ ಮಸ್ಕ್ ಸೇರಿದಂತೆ ಹಲವು ಗಣ್ಯರ ಡಿಎನ್‌ಎ ಟೆಸ್ಟಿಂಗ್ ರಿಪೋರ್ಟ್ ತಮ್ಮ ಬಳಿ ಇದೆ ಎಂದು ಹ್ಯಾಕರ್ಸ್ ಹೇಳಿಕೊಂಡಿದ್ದರೆ, ಆ ಗಣ್ಯರ ಡಿಎನ್‌ಎ ಟೆಸ್ಟ್ ತಾನು ಮಾಡಿಲ್ಲ ಎಂದಿದೆ ಕಂಪನಿ. ■

## ಸೈಬರ್ ಕ್ರೈಂ; ಸರ್ಟ್-ಇನ್ ಎಚ್ಚರಿಕೆ

ಡಿಜಿಟಲ್ ಯುಗದಲ್ಲಿ ಈಜುತ್ತಿರುವ ನಮಗೆ ಸೈಬರ್ ಕ್ರೈಂ ದೊಡ್ಡ ಸವಾಲಾಗಿದ್ದು, ಅದನ್ನು ಎದುರಿಸುವ ಬಗ್ಗೆ ಕೇಂದ್ರ ಸರ್ಕಾರದ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ ಟೀಮ್–ಇನ್ ಇಂಡಿಯಾ (ಸರ್ಟ್–ಇನ್) ಈಚೆಗೆ ಹಲವು ಎಚ್ಚರಿಕೆಯ ಸಂದೇಶಗಳನ್ನು ನೀಡಿದೆ. ಅವುಗಳ ಮಾಹಿತಿ ಈ ಕೆಳಗಿನಂತಿದೆ.

- ಬ್ಯಾಂಕ್ ವಿವರಗಳನ್ನು ನವೀಕರಿಸಿ.
- ಅನಾಮಿಕ ಅಪ್‌ಡೇಟ್‌ಗಳು ಹಾಗೂ ಲಿಂಕ್‌ಗಳನ್ನು ಕ್ಲಿಕ್ ಮಾಡದಿರಿ.
- ಕೆವೈಸಿ ವಿವರಗಳನ್ನು ಕಾಲಕಾಲಕ್ಕೆ ನವೀಕರಿಸಿ.
- ಉಚಿತ ಉಡುಗೊರೆಯಂತಹ ಆಮಿಷಗಳತ್ತ ವಾಲದಿರಿ.
- ಬ್ಯಾಂಕ್ ಖಾತೆ, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಬ್ಲಾಕ್ ಆಗುತ್ತದೆ ಎಂಬ ಅನಾಮಿಕ ಕರೆಗಳಿಗೆ ಕಿವಿಗೊಡದಿರಿ.
- ಎಂತಹ ಸಂದರ್ಭದಲ್ಲೂ ವೈಯಕ್ತಿಕ ಮಾಹಿತಿ ಬಿಟ್ಟುಕೊಡಬೇಡಿ.
- ಅಧಿಕೃತ ಮೂಲಗಳನ್ನಷ್ಟೇ ನಂಬಿ.
- ಒಟಿಪಿ ಹಂಚಿಕೊಳ್ಳಬೇಡಿ.

## ಸಂಗೀತ ಗುನುಗಿದರೆ ಸಾಕು

ಎಷ್ಟೋ ಬಾರಿ ಹಾಡಿನ ಸಂಗೀತವಷ್ಟೇ ನೆನಪಾಗುತ್ತದೆ. ಅದರ ಸಾಹಿತ್ಯ ನೆನಪಿಗೆ ಬರುವುದೇ ಇಲ್ಲ. ಹೀಗಾಗಿ, ಸಂಗೀತವನ್ನಷ್ಟೇ ಗುನುಗಿ ಸುಮ್ಮನಾಗುತ್ತೇವೆ.

ಇಂತಹ ಸಂದರ್ಭದಲ್ಲಿ ಯೂಟ್ಯೂಬ್ ನಿಮ್ಮ ನೆರವಿಗೆ ಬಂದು ನಿಮ್ಮ ಮನದಲ್ಲಿನ ಇಷ್ಟದ ಹಾಡನ್ನು ತನ್ನ ಭಂಡಾರದಿಂದ ಹೆಕ್ಕಿ ತೆಗೆದು ಪ್ಲೇ ಮಾಡುತ್ತದೆ! ಆಶ್ಚರ್ಯಗೊಳ್ಳಬೇಡಿ. ಇಂತಹದ್ದೊಂದು ಫೀಚರ್ ಪರಿಚಯಿಸಲು ಯೂಟ್ಯೂಬ್ ಮುಂದಾಗಿದ್ದು, ಸಂಗೀತವನ್ನಷ್ಟೇ ಯೂಟ್ಯೂಬ್ ಮುಂದೆ ಗುನುಗಿದರೆ ಸಾಕು. ಅದರ ಇಡೀ ಹಾಡನ್ನು ಹುಡುಕಿ ಪ್ಲೇ ಮಾಡುತ್ತದೆ.

ಈ ಫೀಚರ್ ಪ್ರಾಯೋಗಿಕ ಹಂತದಲ್ಲಿದ್ದು, ಶೀಘ್ರವೇ ಬಳಕೆಗೆ ಸಿಗಲಿದೆ. ಇದು ಒಟ್ಟಾರೆಯಾಗಿ ಚಾಟ್‌ಜಿಪಿಟಿ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಈ ಫೀಚರ್ ಬಳಸಿಕೊಳ್ಳುವುದಕ್ಕಾಗಿ ಬಳಕೆದಾರರು, ಯೂಟ್ಯೂಬ್ ವಾಯ್ಸ್ ಸರ್ಚ್ ಟಾಗಲ್ ಮಾಡಬೇಕು. ಬಳಕೆದಾರರು ತಮ್ಮಿಷ್ಟದ ಹಾಡನ್ನು ಹಾಡಬೇಕು, ಇಲ್ಲವೇ ಗುನುಗಬೇಕು ಮತ್ತು ಕನಿಷ್ಠ ಮೂರು ಸೆಕೆಂಡ್‌ವರೆಗೂ ಅಥವಾ ಹಾಡು ಗುರುತಿಸುವವರೆಗೂ ಹೋಲ್ಡ್ ಮಾಡಬೇಕಾಗುತ್ತದೆ. ಆನಂತರ ಹಾಡು ನಿಮ್ಮ ಮುಂದೆ ತೆರೆದುಕೊಳ್ಳುತ್ತದೆ. ■